ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ ಸಿ 3810-2022

ಸಿ.ಡಬ್ಲ್ಯೂ-6
ಪಿ.ಡಬ್ಲ್ಯೂ-6

**ಸಾಕ್ಷಿಗೆ ದಿಃ 16.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿಪರಃ ಶ್ರೀ.H.B.Y ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಚಾಸಾ 2 ನನ್ನ ಮಾವ ಆಗಬೇಕು ಎಂದರೆ ಸರಿ. ಈ ದಿನ ನಾನು ನ್ಯಾಯಾಲಯಕ್ಕೆ ಅವರೊಂದಿಗೆ ಬಂದಿರುತ್ತೇನೆ ಎಂದರೆ ಸರಿ. ನನ್ನ ಜಮೀನು ನನ್ನ ಮಾವನ ಜಮೀನಿನಿಂದ 200 ಮೀಟರ ಅಂತರದಲ್ಲಿರುತ್ತದೆ.  ನನ್ನ ಜಮೀನಿನ ಸರ್ವೆ ನಂ 43 ಆಗಿರುತ್ತದೆ. ಗಲಾಟೆ ಆದ ಜಾಗದ ಸರ್ವೆ ನಂ ಏನು ಎಂದರೆ ಸಾಕ್ಷಿ ಅದು ಗ್ರಾಮ ಠಾಣಾ ಆಗಿರುತ್ತದೆಂದು ಹೇಳುತ್ತಾರೆ ಅದು ಮೂಲತಃ ಹಟ್ಟಿ ಜಾಗವೆಂದರೆ ಸರಿ. ಸದರಿ ಸ್ವತ್ತು ಜಾಗೀರದಾರರ ಸ್ವತ್ತು ಎಂದರೆ ಸರಿ. ಆರೋಪಿ 1 ಮತ್ತು ಅವರ ಕುಟುಂಬದವರೆಲ್ಲರೂ ಬೆಂಗಳೂರಿನಲ್ಲಿರುತ್ತಾರೆ ಎಂದರೆ ಸರಿ. ನಾನು ಘಟನೆ ಸಂಬಂದ 1 ಬಾರಿ ಮಾತ್ರಪೋಲಿಸ ಠಾಣೆಗೆ ಹೋಗಿರುತ್ತೇನೆ. ದಿನಾಂಕ ನನಗೆ ನೆನಪಿಲ್ಲವೆಂದು ಹೇಳುತ್ತಾರೆ. ಹೇಳಿಕೆಯಲ್ಲಿ ಏನು ಬರೆದಿದೆಂದು ಗೊತ್ತಿಲ್ಲವೆಂದರೆ ಸರಿಯಲ್ಲ.

ಜೆ.ಸಿ.ಬಿ ಹಟ್ಟಿ ಜಾಗವನ್ನು ಸ್ವಚ್ಚಗೊಳಿಸುತ್ತಿತ್ತು ಎಂದರೆ ಸರಿ. ನನಗೆ ನಮ್ಮ ಊರಿನ ಪಂಚಾಯಿತಿಯ ಸದಸ್ಯ ಕೃಷ್ಣೇಗೌಡ ನನಗೆ ಗೊತ್ತು ಅವರು ನನ್ನ ಮಾವನೊಂದಿಗೆ ಚನ್ನಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರ ಚೇತಾವಣೆಯ ಮೇರೆಗೆ ನನ್ನ ಮಾವ ಸುಳ್ಳು ದೂರನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಮದ್ಯಾಹ್ನ 2 ಗಂಟೆ ಸಮಯವಾಗಿತ್ತು.  ನಾನು ಹೇಳುವ ರೀತಿಯಲ್ಲಿ ಯಾವುದೇ ಗಲಾಟೆ ಆಗಿರುವುದಿಲ್ಲ ಚಾಸಾ 2 ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ

ಸರಿಯಲ್ಲ. ನಾನು ಹೇಳಿದಂತೆ ಆರೋಪಿತರು ಬೈಯುತ್ತಿರಲಿಲ್ಲವೆಂದರೆ ಸರಿಯಲ್ಲ. ಪೋಲಿಸರು ಅದೇ ದಿನ ಗಲಾಟೆ ಆದ ನಂತರ ಬಂದಿರುತ್ತಾರೆ. ಪೋಲಿಸರು ಬಂದು ನೋಡಿಕೊಂಡು ನಂತರ ಠಾಣೆಗೆ ಬಂದು ಹೇಳಿಕೆ ನೀಡುವಂತೆ ಹೇಳಿರುತ್ತಾರೆ. ನಾನು ಅದೇ ದಿನ ಹೋಗಿ ಹೇಳಿಕೆ ನೀಡಿರುತ್ತೇನೆ. ಸಂಜೆ 4.30 ರಿಂದ 5 ಗಂಟೆಯ ಸಮಯದಲ್ಲಿ ಹೋಗಿ ನೀಡಿರುತ್ತೇನೆ. ನಾನು ದಿನ ನನ್ನ ಜೊತೆ ಯಾರೂ ಬಂದಿರಲಿಲ್ಲವೆಂದು ಹೇಳುತ್ತಾರೆ. ಆರೋಪಿತರ ಕಲ್ಲಿನಿಂದ ಹೊಡೆದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲವೆಂದರೆ ಸರಿಯಲ್ಲ.

ಚಾಸಾ 2 ಅವರಿಗೆ ತೊಡೆಯ ಸಂದಿಯಲ್ಲಿ ಏಟಾಗಿರುತ್ತದೆಂದು ಹೇಳುತ್ತಾರೆ. ಬೇರೆ ಯಾವ ಬಾಗಕ್ಕೂ ಏಟಾಗಿರಲಿಲ್ಲವೆಂದರೆಸಾಕ್ಷಿ ಬುಜದ ಬಳಿ ಹೊಡೆದಿದ್ದರು ಎಂದು ಹೇಳುತ್ತಾರೆ. ಯಾವ ಭುಜಕ್ಕೆ ಎಂದು ನನಗೆ ನೆನಪಿಲ್ಲವೆಂದು ಹೇಳುತ್ತಾರೆ.ಯಾವ ಭುಜಕ್ಕೆ ಹೊಡೆದಿರುತ್ತಾರೆಂದು ನಾನು ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಕಲ್ಲಿನಿಂದ ಹೊಡೆದರೆ ಕಾಲು ಮುರಿಯುತ್ತದೆ ಅಥವಾ ಜೀವ ಹೋಗುತ್ತದೆ ಎಂದರೆ ಸಾಕ್ಷಿ ಹೊಡೆಯುವಾಗ ತಪ್ಪಿಸಿಕೊಂಡಿರತ್ತಾರೆಂದು ಹೇಳುತ್ತಾರೆ. ಆರೋಪಿತರಿಗೂ ಮು. ಮಾ. ಮತ್ತು ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಚಾಸಾ 2 ಮತ್ತು ಕೃಷ್ಣೇಗೌಡ ಅವರ ಚೇತಾವಣೆಯ ಮೇರೆಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸವಿತಾ ನನ್ನ ಅತ್ತೆ ಆಗಬೇಕು ಎಂದರೆ ಸರಿ. ಆ ದಿನ ಅವರು ಯಾವ ಬಣ್ಣದ ಸೀರೆ ಧರಿಸಿದ್ದರು ಎಂದರೆ ಸಾಕ್ಷಿಬಿಳಿ ಬಣ್ಣದ್ದಾಗಿರುತ್ತದೆಂದು ಹೇಳುತ್ತಾರೆ. ನಾನು ಹೇಳುವ ರೀತಿ ಯಾವುದೇ ಘಟನೆ ಆಗಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಲಾಟೆ ಆದಾಗ 10-12 ಜನ ಇದ್ದರು ಆರೋಪಿತರನ್ನು ಮಾತ್ರ ಗುರುತಿಸಬಲ್ಲೇ ಎಂದು ಹೇಳುತ್ತಾರೆ. ಆರೋಪಿ 1 ಅವರ ಕೋಳಿ ಪಾರಂ ಹಟ್ಟಿ ಜಾಗದ ಪಕ್ಕ ಇದೆ ಎಂದರೆ ಸರಿ. ಆರೋಪಿತರಿಗೂ ಚಾಸಾ 2 ಅವರಿಗೆ ಅಷ್ಟಕ್ಕೆಷ್ಟೇ ಎಂದರೆ ಸಾಕ್ಷಿ ಗಲಾಟೆ ಆದಾಗಿನಿಂದ

ಅಷ್ಟಕ್ಕೇಷ್ಟೇ ಎಂದು ಹೇಳುತ್ತಾರೆ. ನಾನು ಪೋಲಿಸ ಠಾಣೆಯಲ್ಲಿ ಹೇಳಿಕೆ ನೀಡಿಲ್ಲವೆಂದರೆ ಸರಿಯಲ್ಲ. ಘಟನೆ ನಡೆದಾಗ ಸ್ಥಳದಲ್ಲಿ 5-6 ಕಲ್ಲುಗಳಿದ್ದವು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.